ಪ್ರಶ್ನಿಸಬೇಕೆಂದು ನಾನು ಬಯಸುತ್ತಿದ್ದೆ. ಹುಡುಗಿ ಮಾಡರ್ನ್ ಆಗಿ ತೋರುತ್ತಿದ್ದಳು. ಆದರೆ ಅವಳ ಪಕ್ಕದಲ್ಲಿ ಕೂತ, ನನಗಿಂತ ಸ್ವಲ್ಪ ಕಡಿಮೆ ವಯಸ್ಸಿನ ಹಾಗೂ ಅವಳ ತಾಯಿಯಂತಿದ್ದ ಮಹಿಳೆ ಒಂದೇ ಸಮನೆ ನನ್ನೆದುರು ಪ್ರಶ್ನೆಗಳನ್ನು ಹಾಕಲು ಆರಂಭಿಸಿದಳು; ಇದನ್ನು ನೋಡಿ ನನ್ನ ಮನಸ್ಸಿನಲ್ಲಿ ಹಾಹಾಕಾರವೆದ್ದಿತು:

ನೀವು ಮದುವೆಯಾದ ನಂತರ ಮಗ ಸೊಸೆಯೊಂದಿಗೆ ಇರ್ತೀರ?

ಮನೆ ನಿಮ್ಮ ಹೆಸರಿಗಿದೆಯೋ ಅಥವಾ ಮಗನ ಹೆಸರಿಗಿದೆಯೋ?

ನೀವು ಎರಡನೆಯ ಮದುವೆಯನ್ನು ಯಾಕೆ ಮಾಡಿಕೊಳ್ಳಲಿಲ್ಲ?...

ಅವಳ ಈ ಪ್ರಶ್ನೆಯನ್ನು ಕೇಳಿದಾಗ ನನ್ನ ತಾಳ್ಮೆಯ ಕಟ್ಟೆ ಒಡೆಯಿತು:

ನಿಮ್ಮ ಬೋಳು ತಲೆಗೆ ನೀವೇಕೆ ಚಿಕಿತ್ಸೆಯನ್ನು ಮಾಡಿಸಿಕೊಳ್ಳಲಿಲ್ಲ?

ನಾನೇನು ಉತ್ತರವನ್ನು ಕೊಟ್ಟೆನೋ, ತಿಳಿಯಲಿಲ್ಲ. ಮರಳಿ ಬರುವಾಗ ಲಾಲಾ ಮೆಲ್ಲನೆ ಹೇಳಿದ, “ಅಂಕಲ್, ನೀವು ಭವಿಷ್ಯದಲ್ಲಿ ಹುಡುಗಿಯನ್ನು ನೋಡಲು ಒಂಟಿಯಾಗಿ ಬರಬೇಡಿ. ಫ್ಯಾಮಿಲಿ... ಫ್ರೆಂಡಿನ ಫ್ಯಾಮಿಲಿ ಮುಂತಾದವರೊಂದಿಗೆ ಬನ್ನಿ. ಆಗ ಸರಿಯಾದ ಇಂಪ್ರೆಶನ್ ಬೀಳುತ್ತೆ.”

ನನಗೆ ವಿಷಯ ಅರ್ಥವಾಯಿತು. ಅರೇಂಜ್ಡ್ ಮ್ಯಾರೇಜಿಗೆ ತನ್ನದೇ ಆದ ನಿಯಮ ಮತ್ತು ಸಿದ್ಧಾಂತಗಳಿರುತ್ತವೆ. ನಾನು ಅನೇಕ ವರ್ಷಗಳ ಕಾಲ ಅಬೂದಾಬಿಯಲ್ಲಿ ನೌಕರಿ ಮಾಡಿದ ನಂತರ ಮೂರು ವರ್ಷಗಳ ಹಿಂದೆ ಮರಳಿ ಬಂದಿದ್ದೇನೆ. ಆರಂಭದ ಕೆಲವು ವರ್ಷ, ನನ್ನೊಂದಿಗೆ ವರ್ಷಾ ಮತ್ತು ಅಂಶುಲ್ ಸಹ ಇದ್ದರು. ಆದರೆ ಅಂಶುಲ್ ವಿದ್ಯಾಭ್ಯಾಸ ಮಾಡಲು ದಿಲ್ಲಿಗೆ ಬಂದಾಗ, ವರ್ಷಾ ಅವನೊಂದಿಗಿರಲು ನಿರ್ಧರಿಸಿದಳು. ನನ್ನೊಂದಿಗೆ ಜೀತರಾಮ ಉಳಿದ. ಅಂಶುಲ್ ವಿದ್ಯಾಭ್ಯಾಸ ಮುಗಿಸಿ, ಮರ್ಚೆಂಟ್ ನೇವಿಗೆ ಹೊರಟು ಹೋದ. ಮೂರು ವರ್ಷಗಳ ನಂತರ ನಾನು ಮರಳಿ ನನ್ನ ಊರಿಗೆ ಬಂದಾಗ, ನಾನು ಈ ಸಮಾಜದಲ್ಲಿರಲು ಯೋಗ್ಯನಲ್ಲವೆಂದು ಮನದಟ್ಟಾಯಿತು. ವರ್ಷಾ ಸತ್ತ ನಂತರವಂತೂ ಈ ಭಾವನೆ ಹೆಚ್ಚಿತು. ಮನೆಗೆ ಅತಿಥಿಗಳು ಬಂದಿದ್ದಾರೆ, ಇಷ್ಟು ಚಿಕ್ಕ ಪಂಚೆ ಉಡಬೇಡಿ ಎಂದು ಅವಳು ನನ್ನನ್ನು ತಡೆಯುತ್ತಿದ್ದಳು. ನನ್ನ ವಶದಲ್ಲಿದ್ದರೆ, ಯಾವುದನ್ನೋ ಧರಿಸಿ ಜೀವನವನ್ನು ಕಳೆಯುತ್ತಿದ್ದೆ. ಇಲ್ಲಿಗೆ ಬಂದ ನಂತರವೇ, ಸದಾ ತಿನ್ನುವ ಬಗ್ಗೆ ಮಾತನಾಡುವುದು ಸರಿ, ಆದರೆ ಕುಡಿಯುವ ಬಗ್ಗೆ ಮಾತನಾಡುವುದು ಸರಿಯಲ್ಲವೆಂದು ತಿಳಿಯಿತು. ವರ್ಷಾ ನನ್ನನ್ನೆಂದೂ ಒಬ್ಬ ಕುಡುಕನಂತೆ ಎಕ್ಸ್‌ಪೋಜ್ ಮಾಡಿರಲಿಲ್ಲ. ಇಲ್ಲಿ ನಾನಾವಿಧದಲ್ಲಿ ಮದ್ಯದ ವ್ಯಸನವನ್ನು ಬಿಡಿಸುವ ವಿಧಾನಗಳು ದೊರೆತವು.

ನೆರೆಹೊರೆಯವರು ಮತ್ತು ಸಂಬಂಧಿಕರು ಒಂದೇ ವರ್ಷದಲ್ಲಿ ನಾನು ಬದುಕಿರುವುದನ್ನೇ ದುಸ್ತರ ಮಾಡಿದರು. ಯಾವಾಗ ನೋಡಿದರೂ ಅಂಶುಲನ ಮದುವೆಯ ಬಗ್ಗೆ ಪ್ರಸ್ತಾಪಿಸುತ್ತಿದ್ದರು, “ಮಗ ಮೂವತ್ತಕ್ಕೆ ಕಾಲಿಟ್ಟ, ಅವನಿಗೆ ಮದುವೆ ಮಾಡುವುದಿಲ್ಲವೇ?”

ನನಗೆ ಎಲ್ಲಾ ವಿಧದಲ್ಲಿ ಬ್ಲಾಕ್‌ಮೇಲ್ ಮಾಡಲಾಗುತ್ತಿತ್ತು, ಅವನಿಗೆ ಮದುವೆಯನ್ನು ಮಾಡದಿದ್ದರೆ, ನನಗೆ ಎಂತೆಂಥ ಕಷ್ಟಗಳು ಎದುರಾಗಬಹುದೆಂದು ಹೆದರಿಸಲಾಯಿತು. ದೂರದ ಸಂಬಂಧದ ಅಜ್ಜಿಯೊಬ್ಬರು, ‘ನಿನ್ನಿಂದಾಗಿ ನಿನ್ನ ಮಗನ ಮಾನಸಿಕ ಸಂತುಲನ ಬಿಗಡಾಯಿಸಬಹುದು’ ಎಂದೂ ಹೇಳಿದರು.

ಕಡೆಗೆ ಅಂಶುಲನ ಮದುವೆಯನ್ನು ಮಾಡುವುದಾಗಿ ನಿರ್ಧರಿಸಿದೆ. ಮಗ ತನಗೆ ತಾನೇ ಹುಡುಗಿಯನ್ನು ಹುಡುಕದಾದ, ನನ್ನ ಕೆಲಸವನ್ನೂ ಹಾಳು ಮಾಡಿದ. ನಾನು ನಿತ್ಯ ಲಂಚ್‌ಗೆ